**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ : 16 (ಚಾಸಾ : 43 )

ಪ್ರಮಾಣೀಕರಿಸಿದ ದಿನಾಂಕ : 10.06.2019

ಹೆಸರು : ಡಾ. ಉಮೇಶ್ ಬಾಬು. ಆರ್

ತಂದೆಯ ಹೆಸರು : ರಾಮಯ್ಯ

ವಯಸ್ಸು : 42 ವರ್ಷ

ಕೆಲಸ : ಪ್ರೊಪೆಸರ್ ಮತ್ತು ಹೆಚ್ ಒಡಿ, ನ್ಯಾಯ ವೈದ್ಯಶಾಸ್ತ್ರ ವಿಭಾಗ, ಕೊಡಗು, ವೈದ್ಯಕೀಯ ವಿಜ್ಞಾನ ಸಂಸ್ಥೆ

ವಾಸ : ಕೊಡಗು

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ನಾನು 2008 ಸೆಪ್ಟೆಂಬರ್ ರಿಂದ ಅಕ್ಟೋಬರ್ 2015 ರವರೆಗೆ ನ್ಯಾಯ ವೈದ್ಯಶಾಸ್ತ್ರ ವಿಭಾಗದಲ್ಲಿ ದೇವರಾಜು ಅರಸು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಕೆಲಸ ಮಾಡಿರುತ್ತೇನೆ. ದಿಃ 11.07.2013 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ತಹಶೀಲ್ದಾರ್ ಕೋಲಾರ ರವರಿಂದ ಮನವಿಯನ್ನು ಪಡೆದುಕೊಂಡಿದ್ದು, ಕೋಲಾರ ನಗರ ಠಾಣೆಗೆ ಸಂಬಂದಪಟ್ಟ ಕ್ರೈಂ. ನಂಬರ್ 185/2013 ಪ್ರಕರಣಕ್ಕೆ ಸಂಬಂದಪಟ್ಟಂತೆ ವೀಣ ರವರ ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತೇನೆ. ಪೊಲೀಸರು ಕೊಟ್ಟ ಮಾಹಿತಿಯನ್ನು ದಾಖಲೆಯಲ್ಲಿ ಬರೆದಿರುತ್ತೇನೆ. ಸದರಿ ಶವದ ಮೈ ಮೇಲೆ ನೇಣಿನ ಗುರ್ತು ಇತ್ತು. ಥೇರಾಯ್ಡ್ ಕಾರ್ಟಿಲೇಜ್ ವರೆಗೆ ಇತ್ತು. A ligature abrasion is seen at the level of thyriod cartilage extending horizantally on either sides of the neck, measuring 18 cm x 3 cms. Ligature mark is

situated 5cm below the right ear lobe, 6 cms x below the left ear lobe and at midline 7 cms below the chin. other injuries seen over the body.

ನೇಣಿಗೆ ಉಪಯೋಗಿಸಿದ್ದ ಹಸಿರು ಬಣ್ಣದ ವೇಲ್ ಅನ್ನು ಪೊಲೀಸರು ತಂದು ತೋರಿಸಿದರು. ಆದರೆ ಅದರಲ್ಲಿ ಗಂಟು ಇರಲಿಲ್ಲ. ಅದನ್ನು ತಿರುಚಿ ನೋಡಿ ಸದರಿ ಗಾಯಕ್ಕೆ ಹೋಲಿಕೆ ಮಾಡಿದಾಗ ಅವು ತಾಳೆಯಾಗುತ್ತಿತ್ತು.

Brain: Brain is intact and congested and shows petechial haemorrhages in the white matter.

All other organs were congested. Ligature abrasion is antemortem in nature.

On bloodless dessection of the neck: There is contusion of sternocleido mustoid and strap muscles of the neck beneath the ligature mark, haemorrhages are seen in the thyroid gland.

There is fracture of thyroid cartilage. Hyoid bone was intact.

ನಾನು ಆ ದಿನ ಪ್ರಾಥಮಿಕ ಅಭಿಪ್ರಾಯನ್ನು ನೀಡಿದ್ದು, ನಂತರ ಎಫ್.ಎಸ್.ಎಲ್ ಅಭಿಪ್ರಾಯ ಪಡೆದುಕೊಂಡು ನಂತರ ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ.

According to me the death is due to ligature strangulation. ಆ ಬಗ್ಗೆ ನಾನು ಶವ ಪರೀಕ್ಷಾ ವರದಿಯನ್ನು ನೀಡಿದ್ದು, ಅದನ್ನು ನಿಪಿ 17 ಮತ್ತು ಸಹಿಯನ್ನು ನಿಪಿ 17 (ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ನಾನು ತನಿಖಾಧಿಕಾರಿಯವರು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರುತ್ತೇನೆ. ದಿಃ 05.09.2013 ರಂದು ಡಿವೈಎಸ್ಪಿ ರವರಿಂದ ನನಗೆ ಮಾಹಿತಿ ಕೋರಿ ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದು, ಅದಕ್ಕೆ ನಾನು ಉತ್ತರಗಳನ್ನು ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 18 ಮತ್ತು ಸಹಿಯನ್ನು ನಿಪಿ 18 (ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ಕೊಟ್ಟ ಉತ್ತರವನ್ನು ನಿಪಿ 19 ಮತ್ತು ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು.

1. The ligature mark is present over front and sides of neck and discontinuous at the back.

2. Yes, the veil produced by the police at the time of Post mortem examination was examined and opined in post mortem report that ligature mark corresponds to the veil on twisting.

3. Yes, a person can die if he/she is strangulated with the said veil.

4. The post mortem finding of the neck structures, the ligature mark and other post mortem findings are suggestive of strangulation.

5. In my opinion, death is due to ligature strangulation. Since the body was kept in cold storage prior to post mortem examination, exact time since death cannot be opined.

ಅದೇ ದಿನ ಪೊಲೀಸರು 2 ವರ್ಷದ ದೀಪ್ತಿ ಎಂಬ ಬಾಲಕಿಯ ಶವ ಪಂಚನಾಮೆ ಮಾಡುವಂತೆ ಮನವಿ ಕೊಟ್ಟಿದ್ದು, ಅದರಂತೆ ನಾನು ಸದರಿ ಶವ ಪಂಚನಾಮೆಯನ್ನು ಮಾಡಿರುತ್ತೇನೆ. ಆ ಮಗುವಿನ ಸಾವಿಗೂ ಅದೇ ಕಾರಣವನ್ನು ಪೊಲೀಸರು ನೀಡಿರುತ್ತಾರೆ.

A ligature abrasion is seen at the level of thyriod cartilage extending horizantally on either sides of the neck, measuring 14 cm x 3 cms. On right side the ligature abrasion is situated 4cm below the right ear lobe, 5 cms x below the left ear lobe and at midline 5 cms below the chin. other injuries seen over the body.

ಸದರಿ ಕೃತ್ಯಕ್ಕೆ ಉಪಯೋಗಿಸಿದ್ದ ಪಿಂಕ್ ಬಣ್ಣದ ವೇಲ್ ಅನ್ನು ಪೊಲೀಸರು ತಂದು ತೋರಿಸಿದರು. ಆದರೆ ಅದರಲ್ಲಿ ಗಂಟು ಇರಲಿಲ್ಲ. ಅದನ್ನು ತಿರುಚಿ ನೋಡಿ ಸದರಿ ಗಾಯಕ್ಕೆ ಹೋಲಿಕೆ ಮಾಡಿದಾಗ ಅವು ತಾಳೆಯಾಗುತ್ತಿತ್ತು. ಸದರಿ ಗುರ್ತು ಮರಣಪೂರ್ವದ್ದಾಗಿದೆ.

Brain: Brain is intact and congested and shows petechial haemorrhages in the white matter.

All other organs were congested. Ligature abrasion is antemortem in nature.

On bloodless dessection of the neck: There is contusion of sternocleido mustoid and strap muscles of the neck beneath the ligature mark, haemorrhages are seen in the thyroid gland.

Hyoid bone and thyroid cartilage are intact.

ನಾನು ಆ ದಿನ ಪ್ರಾಥಮಿಕ ಅಭಿಪ್ರಾಯನ್ನು ನೀಡಿದ್ದು, ನತರ ಎಫ್.ಎಸ್.ಎಲ್ ಅಭಿಪ್ರಾಯ ಪಡೆದುಕೊಂಡು ನಂತರ ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ. According to me the death is due to ligature strangulation. ಆ ಬಗ್ಗೆ ನಾನು ಶವ ಪರೀಕ್ಷಾ ವರದಿಯನ್ನು ನೀಡಿದ್ದು, ಅದನ್ನು ನಿಪಿ 20 ಮತ್ತು ಸಹಿಯನ್ನು ನಿಪಿ 20 (ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ನಾನು ತನಿಖಾಧಿಕಾರಿಯವರು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರುತ್ತೇನೆ. ದಿಃ 05.09.2013 ರಂದು ಡಿವೈಎಸ್ಪಿ ರವರಿಂದ ನನಗೆ ಮಾಹಿತಿ ಕೋರಿ ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದು, ಅದಕ್ಕೆ ನಾನು ಉತ್ತರಗಳನ್ನು ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿಪಿ 21 ಮತ್ತು ಸಹಿಯನ್ನು ನಿಪಿ 21 (ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ಕೊಟ್ಟ ಉತ್ತರವನ್ನು ನಿಪಿ 22 ಮತ್ತು ಸಹಿಯನ್ನು ನಿಪಿ 22(ಎ) ಎಂದು ಗುರುತಿಸಲಾಯಿತು.

1. The ligature mark is present over front and sides of neck and discontinuous at the back.

2. Yes, the veil produced by the police at the time of Post mortem examination was examined and opined in post mortem report that ligature mark corresponds to the veil on twisting.

3. Yes, a person can die if he/she is strangulated with the said veil.

4. In my opinion, death is due to ligature strangulation. Since the body was kept in cold storage prior to post mortem examination, exact time since death cannot be opined.

Always ligature strangulation suggest homicide and strangulation by one self is imposable.

ನ್ಯಾಯಾಲಯದ ಮುಂದೆ ಇರುವ ಎರಡು ವೇಲ್ ಗಳನ್ನು ಸಾಕ್ಷಿ ಗುರುತಿಸುತ್ತಾರೆ. ಹಸಿರು ಬಣ್ಣದ ವೇಲ್ ವೀಣಳಿಗೆ ಸಂಬಂಧಪಟ್ಟಿದ್ದು, ಪಿಂಕ್ ಬಣ್ಣದ ವೇಲ್ ಆ ಮಗುವಿಗೆ ಸಂಬಂಧಪಟ್ಟಿದ್ದು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾ.ಸಾ : 17 (ಚಾಸಾ : 45 )

ಪ್ರಮಾಣೀಕರಿಸಿದ ದಿನಾಂಕ : 10 06.2019

| | |
|---|---|
| ಹೆಸರು | : ಆರ್. ಶ್ರೀನಿವಾಸ |
| ತಂದೆಯ ಹೆಸರು | : ಲೇಟ್ ರಾಮಕೃಷ್ಣಾರೆಡ್ಡಿ |
| ವಯಸ್ಸು | : 63 ವರ್ಷ |
| ಕೆಲಸ | : ನಿವೃತ್ತ ಪ್ರಾಂಶುಪಾಲರು, ಬೆಂಗಳೂರು |
| ವಾಸ | : ಬೆಂಗಳೂರು |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ನಾನು ಸೂಲಿಬೆಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿಃ 25.09.2013 ರಿಂದ ದಿಃ 31.05.2016 ರವರೆಗೆ ಪ್ರಾಂಶುಪಾಲರಾಗಿ ಕೆಲಸ ಮಾಡಿರುತ್ತೇನೆ. ಡಿವೈಎಸ್ ಪಿ ಕೋಲಾರ ರವರು ನಮ್ಮ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಸಂತೋಷ್ ಕುಮಾರ್ ಗೆ ಸಂಬಂದಪಟ್ಟಂತೆ ಹಾಜರಾತಿಯ ದೃಡೀಕರಣ ಪತ್ರ ಕೋರಿದ್ದು ಅದರಂತೆ ನಮ್ಮ ಕಾಲೇಜಿನ ದಾಖಲೆಗಳನ್ನು ಪರಿಶೀಲಿಸಿ 3 ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ಅವುಗಳನ್ನು ನಿಪಿ 23 ರಿಂದ 25 ಮತ್ತು ಸಹಿಗಳನ್ನು ನಿಪಿ 23(ಎ) ರಿಂದ ನಿಪಿ 25(ಎ) ಎಂದು ಗುರುತಿಸಲಾಯಿತು. ನಮ್ಮ ಕಾಲೇಜಿನ ದಾಖಲೆಗಳ ಪ್ರಕಾರ ದಿಃ 10.07.2013 ರಂದು ಕರ್ತವ್ಯಕ್ಕೆ ಗೈರು ಹಾಜರಾಗಿದ್ದರು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ

## ಎಸ್ ಸಿ. 8/2014

ಪ್ರಾಸಾ : 18 (ಚಾಸಾ : 46 )

ಪ್ರಮಾಣೀಕರಿಸಿದ ದಿನಾಂಕ : 10.06.2019

| | |
|---|---|
| ಹೆಸರು | : ಸೌಮ್ಯ. ಎನ್. ಗೌಡ |
| ಗಂಡನ ಹೆಸರು | : ಹರ್ಷ |
| ವಯಸ್ಸು | : 37 ವರ್ಷ |
| ಕೆಲಸ | : ಸಹಾಯಕ ಆಯುಕ್ತರು, ಸ್ಥಳ ನಿರೀಕ್ಷಣೆಯಲ್ಲಿದ್ದೇನೆ |
| ವಾಸ | : ಬೆಂಗಳೂರು |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರಿಂದಃ**

ನಾನು ದಿಃ 01.04.2013 ರಿಂದ ದಿಃ 04.09.2013 ವರೆಗೆ ನಾನು ಕೋಲಾರದಲ್ಲಿ ತಹಶೀಲ್ದಾರ್ ಆಗಿ ಕೆಲಸ ಮಾಡಿರುತ್ತೇನೆ. ಕೋಲಾರ ನಗರ ಠಾಣೆಯಿಂದ ದಿಃ 11.07.2013 ರಂದು ಒಂದು ಅಸ್ವಾಭಾವಿಕ ಮರಣ ಆಗಿರುವುದರಿಂದ ಸದರಿ ಶವದ ಶವ ತನಿಖೆ ಮಾಡುವಂತೆ ನನಗೆ ಮನವಿಯನ್ನು ಕೊಟ್ಟಿದ್ದು, ಅದರಂತೆ ಅದೇ ದಿನ ಬೆಳಿಗ್ಗೆ 7.30 ರಿಂದ 10.00 ಗಂಟೆಯವರೆಗೆ ಜಾಲಪ್ಪ ಆಸ್ಪತ್ರೆಯ ಶವಾಗಾರದಲ್ಲಿ ವೀಣಳ ಮೃತ ದೇಹದ ಬಗ್ಗೆ ಶವ ಪಂಚನಾಮೆ ಮಾಡಿರುತ್ತೇನೆ. 3 ಜನ ಸಾಕ್ಷಿಗಳ ಹೇಳಿಕೆಯನ್ನು ಮಾಡಿಕೊಂಡಿದ್ದು, 4 ಜನ ಪಂಚರಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿಗಳು ಸುನಂದಮ್ಮ, ಚಂದ್ರಶೇಖರ್ ಮತ್ತು ವಿನಯ್. ಸದರಿ ಶವ ಪಂಚನಾಮೆಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 14(ಬಿ) ಎಂದು ಗುರುತಿಸಲಾಯಿತು. ಸದರಿ ಸಾಕ್ಷಿಗಳ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ 14 (ಸಿ) ಯಿಂದ ನಿಪಿ 14(ಇ) ವರೆಗೆ ಗುರುತಿಸಲಾಯಿತು.

ಮೇಲ್ನೋಟಕ್ಕೆ ಆಕೆಯ ಸಾವು ligature strangulation ನಿಂದ ಉಂಟಾಗಿರುವ ಬಗ್ಗೆ ಕಂಡು ಬಂತು. ಸಾಕ್ಷಿಗಳ ಹೇಳಿಕೆಯ ಪ್ರಕಾರ ವರದಕ್ಷಿಣೆ ಕಿರುಕುಳ ಮತ್ತು ಗಂಡ ಮತ್ತೊಂದು ಮದುವೆ ಮಾಡಿಕೊಳ್ಳುವ ಉದ್ದೇಶದಿಂದ ಗಂಡ ಸಂತೋಷ್ ಕುಮಾರ್ ಕತ್ತು ಹಿಸುಕಿ ಸಾಯಿಸಿದ್ದಾನೆ ಎಂದು ಕಂಡು

ಬಂತು. ನಾನು ಶವ ಪರೀಕ್ಷೆ ಮಾಡಿಸುವಂತೆ ಪೊಲೀಸರಿಗೆ ಮನವಿ ಕೊಟ್ಟಿದ್ದೆ. ಸದರಿ ಶವ ಪಂಚನಾಮೆಯ ಒಕ್ಕಣೆಯನ್ನು ನನ್ನ ಉಕ್ತ ಲೇಖನದಂತೆ ನಮ್ಮ ಸಿಬ್ಬಂದಿ ಬರೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ ಃ 19 (ಚಾಸಾ ಃ 42 )

ಪ್ರಮಾಣೀಕರಿಸಿದ ದಿನಾಂಕ ಃ 10.06.2019

ಹೆಸರು ಃ ಮುಸ್ತಕ್ ಅಹಮದ್

ತಂದೆಯ ಹೆಸರು ಃ ಅಬ್ದುಲ್ ಸುಭಾನ್

ವಯಸ್ಸು ಃ 58 ವರ್ಷ

ಕೆಲಸ ಃ ಕಿರಿಯ ಇಂಜಿನಿಯರ್ , ಪಿಡಬ್ಲ್ಯೂಡಿ , ಸಬ್ ಡಿವಿಜನ್, ಕೋಲಾರ

ವಾಸ ಃ ಕೋಲಾರ

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ನಾನು 2004 ರಿಂದ ಇಲ್ಲಿಯವರೆಗೆ ಮೇಲಿನ ವಿಳಾಸದಲ್ಲಿ ಕಿರಿಯ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ 16-07-2013 ರಂದು ಡಿವೈಎಸ್-ಪಿ ಕೋಲಾರ ರವರ ಕಛೇರಿಯಿಂದ ನಮ್ಮ ಕಛೇರಿಗೆ ಈ ಕೃತ್ಯಕ್ಕೆ ಸಂಬಂಧಪಟ್ಟ ಮನೆಯ ನಕ್ಷೆ ತಯಾರಿಸಿಕೊಡುವಂತೆ ಮನವಿ ಬಂದಿದ್ದು ಅದರಂತೆ ದಿಃ 25-07-2013 ರಂದು ಪೇದೆ ಮುನಿಯಪ್ಪ ನನ್ನನ್ನು ಕೀಲುಕೋಟೆಯ ಮನೆಗೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ್ದು ಅಲ್ಲಿ ಮೊದಲನೆಯ ಅಂತಸ್ತಿನಲ್ಲಿ ಮನೆಯನ್ನು ತೋರಿಸಿದ್ದು ಅಲ್ಲಿ ಅಡುಗೆ ಕೋಣೆಯ ಪಕ್ಕ ಇದ್ದ ಬೆಡ್ ರೂಂ ಅನ್ನು ತೋರಿಸಿದ್ದು ಅಲ್ಲಿ ಘಟನೆ ನಡೆದಿದೆ ಎಂದು ಹೇಳಿದ್ದು ಅದರ ಕರಡು ನಕ್ಷೆಯನ್ನು ತಯಾರಿಸಿಕೊಂಡು ನಂತರ ನಮ್ಮ ಕಛೇರಿಗೆ ಹೋಗಿ ಅಸಲು ನಕ್ಷೆಯನ್ನು ತಯಾರಿಸಿ ಕಳುಹಿಸಿಕೊಟ್ಟೆ ಆ ಮನೆಗೆ ಒಂದು ಮುಖ್ಯ ಬಾಗಿಲು ಇರುವುದು. ಸದರಿ ನಕ್ಷೆಯನ್ನು ನಿಪಿ 26 ಮತ್ತು ಸಹಿಯನ್ನು ನಿಪಿ 26 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.